# ಕೀಲಿ ಉತ್ತರ

**ತರಗತಿ : 9** | **ವಿಷಯ : ತೃತೀಯ ಭಾಷೆ ಕನ್ನಡ** | **9/12**

**ಪ್ರಶ್ನೆ ಸಂಖ್ಯೆ** | **ಉತ್ತರದ ವಿವರ** | **ಅಂಕ ವಿಂಗಡಣೆ**

**I.** 1. C) ದುಃಖ 2. B) ದನಿ 3. B) ಗುಣಸಂಧಿ 4. D) ಸಪ್ತಮಿ 5. A) ರೂಢನಾಮ 6. D) ಅಣ್ಣಂದಿರು
7. A) ಅಸತ್ಯ 8. C) ದ್ವಿರುಕ್ತಿ **(1×8=8)**

**II.** 9. ಲಕ್ಷ್ಮಣ 10. ತಮ್ಮ 11. ಕಂಪು 12. ಗುಂಪು **(1×4=4)**

**III.** 13. ಲೇಖಕರಿಗೆ ಗೌತಮ ಬುದ್ಧನನ್ನು ತಿಳಿದುಕೊಳ್ಳುವಂತೆ ಮಾಡಿದ ಲೇಖನ ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧದಲ್ಲಿ

14. ವಿಶ್ವಕ್ಕೆ ಶಾಂತಿ ಮಂತ್ರವನ್ನು ಬೋಧಿಸಿದವರು ಗೌತಮ ಬುದ್ಧ

15. ಒಕ್ಕಲು ಮಕ್ಕಳು ಅನ್ನಕ್ಕಾಗಿ ತಮ್ಮ ಮಕ್ಕಳನ್ನು ಮಾರಿದರು. ಮಕ್ಕಳನ್ನು ಕಳೆದುಕೊಂಡು ಬಹಳ ದುಃಖವನ್ನು ಅನುಭವಿಸುತ್ತಿದ್ದಾರೆ.

16. ಮುಕ್ಕಣ್ಣ ಎಂದರೆ ಶಿವ. **(1×4=4)**

**IV.** 17. ನಾಲಗೆಯು ಹಾಲು-ನೀರು, ಎಣ್ಣೆ-ತುಪ್ಪ, ಕೆನೆ-ಪಾಕ, ಬಿಸಿ-ತಂಪು ಯಾವುದನ್ನು ಬೇಕಾದರೂ ಸ್ವೀಕರಿಸುತ್ತದೆ. ಆದರೆ ಅದು ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ. ಎಲ್ಲವನ್ನೂ ಸ್ವೀಕರಿಸಿ ತಾನು ನಿರ್ಲೇಪವಾಗಿರುತ್ತದೆ ಮತ್ತು ಶುಭ್ರವಾಗಿರುತ್ತದೆ.

18. 1) ಮೂಗು : ಆಘ್ರಾಣಿಸುತ್ತದೆ.
2) ಕಿವಿ : ಆಲಿಸುತ್ತದೆ.
3) ನಾಲಗೆ : ರುಚಿ ತಿಳಿಸುತ್ತದೆ.
4) ಕಣ್ಣು : ನೋಡುತ್ತದೆ.
5) ಚರ್ಮ : ವಸ್ತುವಿನ ಕೋಮಲತೆ ಅರಿಯುತ್ತದೆ

19. ನರಸಮ್ಮಜ್ಜಿಗೆ ರಾಷ್ಟ್ರೀಯ ವಯೋಶ್ರೇಷ್ಠ ಸಮ್ಮಾನ್ ಪ್ರಶಸ್ತಿ ಬಂದಾಗ ಅದನ್ನು ಸ್ವೀಕರಿಸಲು ದೆಹಲಿಗೆ ವಿಮಾನದಲ್ಲಿ ಹೋಗಬೇಕಾಯಿತು.

20. ರಾಷ್ಟ್ರೀಯ ವಯೋಶ್ರೇಷ್ಠ ಸಮ್ಮಾನ್ ಪ್ರಶಸ್ತಿ ಸ್ವೀಕರಿಸಲು ನರಸಮ್ಮಜ್ಜಿಯು ದೆಹಲಿಗೆ ವಿಮಾನದಲ್ಲಿ ಪ್ರಯಾಣ ಮಾಡಬೇಕಾಗಿತ್ತು.
ವಿಮಾನ ಬಸ್ಸಿಗಿಂತ ಅದೆಷ್ಟು ದೊಡ್ಡದಾಗಿದೆ ಎಂದು ಆಶ್ಚರ್ಯಪಟ್ಟರು. ಗಗನದಲ್ಲಿ ತೇಲುವ ಬಿಳಿ ಮೋಡಗಳನ್ನು ನೋಡಿ ದೇವಾನುದೇವತೆಗಳೆಲ್ಲ ಇಲ್ಲೇ ಇರುವರು ಎಂದು ತಿಳಿದು ಗಗನ ಸಖಿಯರನ್ನು ದೇವಕನ್ಯೆಯರೆಂದು ಭಾವಿಸಿ ಕೈ ಮುಗಿಯಲು ಹೋದರು. ನರಸಮ್ಮಜ್ಜಿಯು ವಿಮಾನ ಪ್ರಯಾಣದಲ್ಲಿ ದೇವಲೋಕಕ್ಕೆ ಹೋಗಿ ಬಂದಷ್ಟು ಸಂಭ್ರಮಪಟ್ಟರು.
(ಮಕ್ಕಳು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿ ಬರೆಯುವುದನ್ನು ಗಮನಿಸಿ ಅಂಕ ನೀಡುವುದು)

21. ದ್ವೇಷ ಅಸೂಯೆಗಳ ಬಂಡೆಯನ್ನು ತಾಳ್ಮೆಯ ಸಿಡಿಮದ್ದು ಹಾಕಿ ಸಿಡಿಸಿ ಸಡಿಲಿಸಬೇಕು.

22. ನಮ್ಮ ನಮ್ಮಲ್ಲಿ ಇರುವ ಅಸಮಾನತೆಯನ್ನು ತೊಡೆದು ಹಾಕಬೇಕು. ಎಲ್ಲರೂ ಸಮಾನರು ಎಂಬ ಭಾವನೆಯಲ್ಲಿ ಬಾಳಬೇಕು. ಆಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ.

23. ಸಮಾಜದಲ್ಲಿ ಮೇಲು-ಕೀಳು, ಬಡವ-ಬಲ್ಲಿದ ಎಂಬಂತಹ ಅಸಮಾನತೆಗಳು ಇಂದಿಗೂ ಕಂಡು ಬರುತ್ತವೆ. ಇಂತಹ ಅಸಮಾನತೆಗಳನ್ನು ಹೋಗಲಾಡಿಸಲು ದಾರ್ಶನಿಕರು, ಶರಣರು, ಸಾಧುಗಳು ಮತ್ತು ಸಂತರು ನಿರಂತರವಾಗಿ ಶ್ರಮಿಸಿದ್ದಾರೆ. ದಯವಿಲ್ಲದ ಧರ್ಮ ಅದಾವುದಯ್ಯ, ದಯವೇ ಬೇಕು ಸಕಲ ಪ್ರಾಣಿಗಳಲ್ಲಿ ಎಂಬ ಬಸವಣ್ಣನವರ ಮಾತು ಅಕ್ಷರಶಃ ಸತ್ಯವಾಗಿದೆ. ಪ್ರೀತಿ, ಪ್ರೇಮ, ತಾಳ್ಮೆ , ಸಮಾನತೆ ಇವುಗಳನ್ನು ಇಂದು ನಾವು ಅಳವಡಿಸಿಕೊಂಡಾಗಲೇ ಮಾನವೀಯತೆಯನ್ನು ಕಾಣಲು ಸಾಧ್ಯವಾಗುತ್ತದೆ.
(ಮಕ್ಕಳು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿ ಬರೆಯುವುದನ್ನು ಗಮನಿಸಿ ಅಂಕ ನೀಡುವುದು)

24. ಸಿಂಹವು ವೇಳೆ ಮೀರಿ ಬಂದ ಮೊಲವನ್ನು ಏಕಿಷ್ಟು ತಡ ಮಾಡಿದೆ ಎಂದು ಗರ್ಜಿಸಿ ಕೇಳಿತು. ಮೊಲವು ದಾರಿಯಲ್ಲಿ ಬರುವಾಗ ಮತ್ತೊಂದು ಸಿಂಹವು ತನ್ನನ್ನು ನೋಡಿತು ಅದರಿಂದ ತಪ್ಪಿಸಿಕೊಂಡು ಬರಲು ತಡವಾಯಿತು ಎಂದಾಗ ಸಿಂಹದ ಕೋಪ ಮಿತಿ ಮೀರಿತು. **(2×8=16)**

**V.** 25. ಆಯ್ಕೆ : ಈ ಮೇಲಿನ ವಾಕ್ಯವನ್ನು ಡಾ. ಟಿ. ಆರ್. ಅನಂತರಾಮು ಅವರ 'ಭೂಮಿಯ ವಯಸ್ಸು' ಕೃತಿಯಿಂದ ಆಯ್ದ 'ಮೊದಲ ಜೀವಿ ಯಾವಾಗ ಹುಟ್ಟಿತು ?' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಜ್ವಾಲಾಮುಖಿಗಳಿಂದ ಬಿಸಿಯಾಗಿದ್ದ ಭೂಮಿಯು ಮೆಲ್ಲನೆ ಬೆವರಿ ನೀರಾಗಿ ಹರಿದು ಸಾಗರ ಸೇರಿತು ಎಂದು ಭೂಮಿಯ ಶೈಶವಾವಸ್ಥೆಯ ಬಗ್ಗೆ ಲೇಖಕರು ವಿವರಿಸಿದ್ದಾರೆ.

ಸ್ವಾರಸ್ಯ : ಸಾಗರಗಳಿಗೆ ನೀರು ಎಲ್ಲಿಂದ ಬಂತು ಎಂಬ ಪ್ರಶ್ನೆಗೆ ಲೇಖಕರು ಭೂಮಿಯ ಶೈಶವಾವಸ್ಥೆಯ ವಿವರಣೆ ನೀಡಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

26. ಆಯ್ಕೆ : ಈ ವಾಕ್ಯವನ್ನು ಎಂ. ಅಕಬರ ಅಲಿಯವರು ಬರೆದ 'ತಮಸಾ ನದಿಯ ಎಡಬಲದಿ' ಕವನ ಸಂಕಲನದಿಂದ ಆಯ್ದ 'ಮಿತ್ರ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಮಿತ್ರನು ಭೂಮಿಯ ಇರುಳನ್ನು ಹೋಗಲಾಡಿಸಿ ಬೆಳಕು ಪಸರಿಸುವಂತೆ ಮಾಡುತ್ತಾನೆ. ಅಂತೆಯೇ ಜೀವನವನ್ನು ನಲಿಯುವಂತೆ ಮಾಡುವ ಸೂರ್ಯನು ಪಾವನ ಪಾತ್ರನೆಂದು ಕವಿ ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಬದುಕಿನ ಕತ್ತಲೆಯನ್ನು ಹೋಗಲಾಡಿಸಿ ಬದುಕಿನಲ್ಲಿ ಸಂತೋಷ ತುಂಬುವ ಕಾರ್ಯವನ್ನು ಸೂರ್ಯನು ಮಾಡುತ್ತಾನೆ ಎಂದು ಕವಿ ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ. **(2×3=6)**

**VI.** 27. ನಮ್ಮಲ್ಲಿ ಗುಡಿಗೆ ಹೋದೊಡನೆ ತಲೆಯುಡುಗೆ ತೆಗೆಯುವ ಪದ್ಧತಿ ಕೆಲವರಲ್ಲುಂಟು. ಅಮೇರಿಕನ್ನರು ಚರ್ಚಿಗೆ ಹೋದಾಗ ಗಂಡಸರು ಮಾತ್ರ ತಲೆಯುಡುಗೆ ತೆಗೆಯುತ್ತಾರೆ. ಆದರೆ ಹೆಂಗಸರು ಹ್ಯಾಟು ಧರಿಸದೆ ಚರ್ಚಿಗೆ ಹೋಗಿ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಅವಮರ್ಯಾದೆ. ನಮ್ಮಲ್ಲಿ ಹಿರಿಯರನ್ನು ಕಾಣಲು ಹೋದಾಗ ಟೋಪಿಯನ್ನು ಧರಿಸಿಕೊಂಡು ನಮ್ರತೆಯಿಂದ ನಮಸ್ಕರಿಸಬೇಕು. ಅವರಲ್ಲಿ ಧರಿಸಿಕೊಂಡಿದ್ದ ಹ್ಯಾಟನ್ನು ದೊಡ್ಡವರ ಬಳಿ ತಲೆಯ ಮೇಲಿಂದ ತೆಗೆದು ಬಗ್ಗಿ ವಂದಿಸಬೇಕು. ಇವೆಲ್ಲ ಸಂಪ್ರದಾಯಕ್ಕನುಗುಣವಾದ ಮರ್ಯಾದೆ. ನಮ್ಮಲ್ಲಿ ಮನೆ, ಕಟ್ಟಡ ಮೊದಲಾದವುಗಳ ಒಳಕ್ಕೆ ಹೋದಾಗ ತಲೆಯುಡುಗೆ ತೆಗೆಯಬೇಕಾಗಿಲ್ಲ. ಅವರಲ್ಲಿ ಮನೆಯೊಳಕ್ಕೆ ಹೋದಾಗ ಹ್ಯಾಟನ್ನು ತೆಗೆಯುವುದು ನಾಗರಿಕ ಲಕ್ಷಣ. ಹೀಗೆ ನಮ್ಮ ಸಂಸ್ಕೃತಿಗೂ ಅಮೇರಿಕದ ಸಂಸ್ಕೃತಿಗೂ ಇರುವ ವ್ಯತ್ಯಾಸ.

28. ಹುಟ್ಟು ಹಬ್ಬಕ್ಕೆ ಚೌಲ ತೆಗೆದಾಗ, ಮುಂಜಿಯಲ್ಲಿ, ಕ್ಲಾಸಿಗೆ ಹೋಗುವಾಗ, ಕಚೇರಿಗೆ ಹೋಗುವಾಗ, ಮದುವೆಯಾಗುವಾಗ, ಚಿಕ್ಕವರು ದೊಡ್ಡವರನ್ನು ನೋಡಲು ಹೋದಾಗ, ಶುಭ ಕಾರ್ಯಗಳಲ್ಲಿ, ಚಳಿ ಆದಾಗ, ಚರ್ಚ್‌ಗೆ ಹೋಗುವಾಗ ಹೀಗೆ ವಿವಿಧ ಸಂದರ್ಭಗಳಲ್ಲಿ ಟೋಪಿಗಳನ್ನು ಹಾಕಿಕೊಳ್ಳುತ್ತಾರೆ.

29. ಕನ್ನಡದ ಬಳಕೆ ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಅದನ್ನು ಉಳಿಸಿ ಬೆಳೆಸುವುದು ಈ ನಾಡಿನ ಪ್ರತಿಯೊಬ್ಬನ ಕರ್ತವ್ಯವಾಗಿದೆ. ನೀರೊಂದಿದ್ದರೆ ಅಲ್ಲಿ ಊರು ಬೆಳೆಯುವುದು. ಹಾಗಾಗಿ ಹಳ್ಳ-ಕೊಳ್ಳಗಳನ್ನು ಸಂರಕ್ಷಿಸುವ ಕೆಲಸವೂ ಆಗಬೇಕು. ನಾಡಿನ ಆರ್ಥಿಕಾಭಿವೃದ್ಧಿಗೆ ಬಹು ಮುಖ್ಯವಾದ ಗಿಡಮರ, ಹೂವು-ಹಣ್ಣು, ಬೀಜಗಳು ಕನ್ನಡ ನಾಡನ್ನು ಉಳಿಸುತ್ತವೆ. ಅಂತಹ ಸಸ್ಯಗಳನ್ನು ಪ್ರತಿದಿನ ನೆನೆಯೋಣ ಎಂಬುದೇ ಈ ಪದ್ಯದ ಸಾರಾಂಶವಾಗಿದೆ.

30. (ಈ ಚಿತ್ರವು ಬಡತನಕ್ಕೆ ಸಂಬಂಧಿಸಿದ್ದಾಗಿದ್ದು ಮಕ್ಕಳು ಬಡತನಕ್ಕೆ ಸಂಬಂಧಿಸಿದಂತೆ ನೀಡಿದ ಉತ್ತರದ ಆಧಾರದ ಮೇಲೆ ಅಂಕಗಳನ್ನು ನೀಡುವುದು) **(3×4=12)**

**VII.** 31. ಜನ್ಮ ಸ್ಥಳ, ಕಾಲಕ್ಕೆ – 1 ಅಂಕ
ಕೃತಿಗೆ – 1 ಅಂಕ
ಭಾಷಾಶೈಲಿಗೆ – 1 ಅಂಕ

ಒಟ್ಟು = 3ಅಂಕಗಳು

ಚಿತ್ರದಲ್ಲಿರುವ ಕವಿಯ ಹೆಸರು ಕುವೆಂಪು. ಕುವೆಂಪುರವರು ೨೯ನೇ ಡಿಸೆಂಬರ್ ೧೯೦೪ರಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ಇವರ ಕೃತಿಗಳು ಬೊಮ್ಮನ ಹಳ್ಳಿಯ ಕಿಂದರಿಜೋಗಿ, ಪಕ್ಷಿಕಾಶಿ, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ, ಬೆರಳ್‌ಗೆ ಕೊರಳ್, ಜಲಗಾರ, ಶೂದ್ರ ತಪಸ್ವಿ, ನೆನಪಿನ ದೋಣಿಯಲ್ಲಿ, ಅಮಲನ ಕಥೆ, ಶ್ರೀ ರಾಮಾಯಣ ದರ್ಶನಂ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ , ಜ್ಞಾನಪೀಠ ಪ್ರಶಸ್ತಿ , ರಾಷ್ಟ್ರಕವಿ, ಪಂಪ ಪ್ರಶಸ್ತಿ , ಪದ್ಮಭೂಷಣ ಪ್ರಶಸ್ತಿ ,ಕರ್ನಾಟಕ ರತ್ನ ಪ್ರಶಸ್ತಿ, ಮೈಸೂರು, ಬೆಂಗಳೂರು, ಕರ್ನಾಟಕ, ಗುಲ್ಬರ್ಗಾ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್ ಪ್ರಶಸ್ತಿಗಳು ಲಭಿಸಿವೆ.

32. ಈ ಚಿತ್ರದಲ್ಲಿರುವ ಸಾಹಿತಿಯ ಹೆಸರು
ಎಸ್. ವಿ. ಪರಮೇಶ್ವರ ಭಟ್ಟರು.
ಇವರು ೧೯೧೪ರ ಫೆಬ್ರವರಿ ೦೮ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ಜನಿಸಿದರು. ಇವರ ಕೃತಿಗಳು ಅಮರಶತಕ, ಇಂದ್ರಚಾಪ, ರಾಗಿಣಿ, ಸುರಹೊನ್ನೆ, ಉಪ್ಪು ಕಡಲು, ಗಗನಚುಕ್ಕಿ, ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ ಇವರಿಗೆ ಲಭಿಸಿದೆ. **(2×3=6)**

**VIII.** 33. ಗಾದೆಯ ಮಹತ್ವ – 1 ಅಂಕ
ಗಾದೆಯ ಅರ್ಥ/ವಿವರಣೆ – 1 ಅಂಕ
ಭಾಷಾಶೈಲಿಗೆ/ಉದಾಹರಣೆಗೆ – 1 ಅಂಕ
ಒಟ್ಟು = 3 ಅಂಕಗಳು **(1×3=3)**

**IX.** 34. ಯಕ್ಷನು ಸರೋವರದ ನೀರನ್ನು ಕುಡಿಯುವ ಮೊದಲು ತನ್ನ ಪ್ರಶ್ನೆಗಳಿಗೆ ಉತ್ತರಿಸಿದ ನಂತರ ನೀರು ಕುಡಿಯಿರಿ ಎಂದರೂ ಧರ್ಮರಾಜನ ನಾಲ್ಕು ತಮ್ಮಂದಿರು ಅವನ ಮಾತು ಧಿಕ್ಕರಿಸಿ ನೀರು ಕುಡಿದು ಅಲ್ಲೇ ಸತ್ತು ಬಿದ್ದರು. ನಂತರ ಬಂದ ಧರ್ಮರಾಜನಿಗೂ ನಾನು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದರೆ ನಿನ್ನ ತಮ್ಮಂದಿರನ್ನು ಬದುಕಿಸುತ್ತೇನೆ ಎಂದನು. ಈ ರೀತಿಯಾಗಿ ಧರ್ಮರಾಜ ಯಕ್ಷ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋಗುತ್ತಾನೆ.
ಯಕ್ಷ – ಭೂಮಿಗಿಂತ ದೊಡ್ಡ ವಸ್ತು ಯಾವುದು ?
ಧರ್ಮರಾಯ – ಭೂಮಿಗಿಂತ ದೊಡ್ಡ ವಸ್ತು ತಾಯಿ.
ಯ – ಆಕಾಶಕ್ಕಿಂತ ಉನ್ನತ ವಸ್ತು ಯಾವುದು ?
ಧ – ತಂದೆ
ಯ – ಗಾಳಿಗಿಂತ ವೇಗವಾದದ್ದು ಯಾವುದು ?
ಧ – ಮನುಷ್ಯನ ಮನಸ್ಸು
ಯ – ಮನುಷ್ಯನನ್ನು ಅತಿಯಾಗಿ ಕಾಡುವುದು ಯಾವುದು ?
ಧ – ಚಿಂತೆ
ಯ – ಸ್ವರ್ಗ ಸಿಗುವುದು ಯಾವುದರಿಂದ
ಧ – ಸತ್ಯ ಮಾರ್ಗದಿಂದ
ಯ – ಧನಗಳಲ್ಲಿ ಅತ್ಯಂತ ಉತ್ತಮ ಧನ ಯಾವುದು ?
ಧ – ವಿದ್ಯಾಧನವೇ ಉತ್ತಮ
ಯ – ಲಾಭವೇನಾದರೂ ಇದ್ದರೆ ಅದು ಯಾವುದು ?
ಧ – ಆರೋಗ್ಯ ಭಾಗ್ಯ
ಯ – ಯಾವುದನ್ನು ಬಿಟ್ಟರೆ ವ್ಯಕ್ತಿ ಜನರಿಗೆ ಪ್ರಿಯವಾಗುವನು ?
ಧ – ಗರ್ವವನ್ನು ಬಿಟ್ಟರೆ
ಯ – ಎಲ್ಲಾ ಸುಖಭೋಗಗಳಿದ್ದೂ ಯಾವಾಗಲೂ ದುಃಖಿಯಾಗಿರುವನು ಯಾರು ?
ಧ – ಪರರ ಏಳಿಗೆಯನ್ನು ಸೈರಿಸಲಾರದವನೇ ಯಾವಾಗಲೂ ದುಃಖಿ
ಯ – ಭಲೇ ಧರ್ಮರಾಜ ಮೆಚ್ಚಿದೆ ನಿನ್ನ ಬುದ್ಧಿವಂತಿಕೆಯನ್ನು ನಿನ್ನ ನಾಲ್ವರು ಸಹೋದರರಲ್ಲಿ ಯಾರನ್ನು ಬದುಕಿಸಲಿ ಎಂದು ಕೇಳಿದನು.

**ಅಥವಾ**

ಸರೋವರದ ಬಳಿ ನೀರು ಕುಡಿಯಲು ಹೋದ ತನ್ನ ತಮ್ಮಂದಿರೆಲ್ಲಾ ಸತ್ತು ಬಿದ್ದಿರುವುದನ್ನು ಕಂಡ ಧರ್ಮರಾಜ ಯಕ್ಷ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ ತನ್ನ ತಮ್ಮಂದಿರನ್ನು ಕಾಪಾಡುವುದೇ ಸರಿಯಾದ ಉಪಾಯ ಎಂದು ಭಾವಿಸಿ ಯಕ್ಷ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸರಿ ಉತ್ತರ ನೀಡುತ್ತಾನೆ. ಆಗ ಧರ್ಮರಾಜನ ಉತ್ತರಗಳನ್ನು ಮೆಚ್ಚಿದ ಯಕ್ಷ ನಿನ್ನ ನಾಲ್ವರು ಸಹೋದರರಲ್ಲಿ ಯಾರನ್ನು ಬದುಕಿಸಲಿ ಎಂದು ಕೇಳಿದಾಗ ಧರ್ಮರಾಯನು ನನಗೆ ಇಬ್ಬರು ತಾಯಂದಿರು ಕುಂತಿ ಮತ್ತು ಮಾದ್ರಿ . ಕುಂತಿಯ ಮಕ್ಕಳಲ್ಲಿ ನಾನು ಜೀವಂತವಾಗಿದ್ದೇನೆ ಮಾದ್ರಿಯ ಮಕ್ಕಳಲ್ಲಿ ಒಬ್ಬನಾದ ನಕುಲನನ್ನು ಬದುಕಿಸಿ ಎಂದು ಕೇಳಿಕೊಂಡನು. ಆಗ ಯಕ್ಷ ಧರ್ಮರಾಜನ ನ್ಯಾಯನಿಷ್ಠೆಯನ್ನು ಮೆಚ್ಚಿ ನಾಲ್ಕು ಜನ ತಮ್ಮಂದಿರನ್ನು ಬದುಕಿಸುತ್ತಾನೆ. ಹೀಗೆ ಧರ್ಮರಾಜ ತನ್ನ ತಮ್ಮಂದಿರನ್ನು ಪಾರುಮಾಡುತ್ತಾನೆ. **(1×4=4)**

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| **X.**35. | ಉಂಬುಡುವುದಕ್ಕಿಲ್ಲದ ಅರಸನೋಲಗಕ್ಕಿಂತ<br>ತುಂಬಿದೂರೊಳಗೆ ತಿರಿದುಂಬುವುದೇ ಲೇಸು<br>ಹಂಬಲಿಸಿ ಹಾಳ್ಹರಟೆ ಹೊಡೆಯುವುದಕ್ಕಿಂತ ಹರಿ<br>ಯೆಂಬ ದಾಸರ ಕೂಡೆ ಸಂಭಾಷಣೆಯೆ ಲೇಸು ।।<br>**ಅಥವಾ**<br>ಮಸೆಯುತಿಹ ಮತ್ಸರದ ನೆರೆಯೊಳಗಿರುವುದಕ್ಕಿಂತ<br>ಹಸನಿಲ್ಲದ ಹಾಳುಗುಡಿಯೆ ಲೇಸು<br>ಬಿಸಜಾಕ್ಷ ಕಾಗಿನೆಲೆಯಾದಿ ಕೇಶವರಾಯ<br>ವಸುಮತಿಯೊಳು ನಿನ್ನ ದಾಸತ್ವವೇ ಲೇಸು ।। | **(1×4=4)** |
| **XI.**36. | ಎ) ಮಾನವನ ಸಹಜ ಧರ್ಮ ನಗು.<br>ಬಿ) ನಗೆಯ ಎರಡು ಬಗೆಗಳು ಮೆಚ್ಚು ನಗೆ ಮತ್ತು ಚುಚ್ಚು ನಗೆ.<br>ಸಿ) ಬುದ್ಧನ ಮುಗುಳು ನಗೆ, ಶ್ರೀ ಕೃಷ್ಣನ ಸರಸ ನಗೆ ಹಾಗೂ ಪಂಪ ಕವಿಯ ರಸನಗೆಗಳಲ್ಲಿ ಮಾಧುರ್ಯವಿದೆ.<br>ಡಿ) ತೆನಾಲಿರಾಮನ ನಗೆ ಕುಚೇಷ್ಟೆಯದ್ದು. | **(1×4=4)** |
| **XII.**37. | ಪ್ರಬಂಧ<br>ಪೀಠಿಕೆ – 1 ಅಂಕ<br>ವಿಷಯ ಜೋಡಣೆ – 1 ಅಂಕ<br>ಉಪಸಂಹಾರ – 1 ಅಂಕ<br>ಭಾಷಾಶೈಲಿಗೆ – 1 ಅಂಕ<br>ಒಟ್ಟು = 4 ಅಂಕ | **(1×4=4)** |
| **XIII.**38. | ಪತ್ರ ಲೇಖನ ಬರೆಯುವುದು<br>ವೈಯಕ್ತಿಕ ಪತ್ರ<br>ಇಂದ, ವಿಳಾಸ, ಸಂಬೋಧನೆ, ದಿನಾಂಕ – 1 ಅಂಕ<br>ಪತ್ರದ ಒಡಲು – 2 ಅಂಕ<br>ಗೆ, ವಿಳಾಸ, ಸಹಿಯೊಂದಿಗೆ ಮುಕ್ತಾಯ – 1 ಅಂಕ<br>ವಿನ್ಯಾಸ, ಭಾಷಾಶೈಲಿಗೆ – 1 ಅಂಕ<br>ಒಟ್ಟು = 5 ಅಂಕಗಳು<br>**ಅಥವಾ**<br>ವ್ಯಾವಹಾರಿಕ ಪತ್ರ<br>ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ – 1 ಅಂಕ<br>ಪತ್ರದ ಒಡಲು – 2 ಅಂಕ<br>ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ – 1 ಅಂಕ<br>ವಿನ್ಯಾಸ, ಭಾಷಾಶೈಲಿಗೆ – 1 ಅಂಕ<br>ಒಟ್ಟು = 5 ಅಂಕಗಳು | **(1×5=5)** |